SEPTEMBER 19, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಡಾಕ್ಟರ್ ಕೆ. ಕಸ್ತೂರಿರಂಗನ್ ವರದಿ ಅನುಷ್ಠಾನ;** ರಾಜ್ಯದ ನಿಲುವು, 27ನೇ ತಾರೀಖಿನ ಒಳಗೆ, ಕೇಂದ್ರಕ್ಕೆ ಸ್ಪಷ್ಟನೆ – ಮುಖ್ಯಮಂತ್ರಿ.

**ಬಾಗಲಕೋಟೆ ಜಿಲ್ಲೆಯಲ್ಲಿ,** ಪೋಷಣ ಮಾಸಾಚರಣೆಗೆ, ಜಿಲ್ಲಾಧಿಕಾರಿ ಸಂಗಪ್ಪ ಚಾಲನೆ.

**ಹುಬ್ಬಳ್ಳಿಯ, ಕೆ.ಎಲ್.ಇ. ಜಗದ್ಗುರು ಗಂಗಾಧರ ಮಹಾಸ್ವಾಮಿಗಳು,** ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆ; ಕೇಂದ್ರ ಸಚಿವ ಅಮಿತ ಶಾ, ಇಂದು ಲೋಕಾರ್ಪಣೆ.

**ಸ್ಟಾರ್ಟ್‌ಅಪ್ ಇಂಡಿಯಾ ಪ್ರಕಲ್ಪ;** ದೇಶದ 1 ಲಕ್ಷ ನವೋದ್ಯಮಗಳ ಪಾಲುದಾರರಾಗಿ, ಮಹಿಳೆಯರ ಸಾರಥ್ಯ.

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯ ಸರ್ಕಾರ,** ತಜ್ಞರ ಸಮಿತಿ ರಚಿಸಿ, ಪಶ್ಚಿಮಘಟ್ಟ ವ್ಯಾಪ್ತಿಯ ಜಿಲ್ಲೆಗಳ, ಭೌತಿಕ ಸಮೀಕ್ಷೆ ನಡೆಸಿ, ಕೇಂದ್ರ ಸರ್ಕಾರ ಹಾಗೂ ಸರ್ವೋಚ್ಚ ನ್ಯಾಯಾಲಯದ, ಹಸಿರು ನ್ಯಾಯಪೀಠಕ್ಕೆ ಮನವರಿಕೆ ಮಾಡಬೇಕು ಎಂಬ ಹಕ್ಕೊತ್ತಾಯಕ್ಕೆ, ಸೂಕ್ತ ತೀರ್ಮಾನ ಕೈಗೊಳ್ಳುವುದಾಗಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಭರವಸೆ ನೀಡಿದ್ದಾರೆ. ಉಡುಪಿ ಜಿಲ್ಲೆ, ಹೆಬ್ರಿಯಲ್ಲಿ ಅವರು, ಡಾಕ್ಟರ್ ಕೆ.ಕಸ್ತೂರಿರಂಗನ್ ವರದಿಯ, ಸಾಧಕ–ಬಾಧಕಗಳ ಕುರಿತು, ಮಾತನಾಡಿದರು. ಈ ತಿಂಗಳ 27ನೇ ತಾರೀಖಿನ ಒಳಗೆ, ರಾಜ್ಯ ಸರ್ಕಾರದ ತೀರ್ಮಾನವನ್ನು, ಕೇಂದ್ರಕ್ಕೆ ತಿಳಿಸಬೇಕಿದೆ ಎಂದರು.

<><><>

**ಬಾಗಲಕೋಟೆ ಜಿಲ್ಲೆ, ನವನಗರದ ಬಿ.ಆರ್.ಅಂಬೇಡ್ಕರ** ಭವನದಲ್ಲಿ, ಪೋಷಣ ಮಾಸಾಚರಣೆಗೆ, ಜಿಲ್ಲಾಧಿಕಾರಿ ಸಂಗಪ್ಪ ಚಾಲನೆ ನೀಡಿದರು. ಗರ್ಭಿಣಿಯರು, ತಾಯಂದಿರು ಪೌಷ್ಟಿಕಾಂಶಯುಕ್ತ, ಸಮತೋಲಿತ ಆಹಾರ ಸೇವಿಸಬೇಕು. ಮಗುವಿನ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ, ತಾಯಿ ಕಾರ್ಡ್ ಮೂಲಕ, ಅಂಗನವಾಡಿಯಲ್ಲಿ ಪೂರಕ ಆಹಾರ, ಆರೋಗ್ಯ ಇಲಾಖೆ ಮೂಲಕ ಸೂಕ್ತ ಚಿಕಿತ್ಸಾ ವ್ಯವಸ್ಥೆ ಕಲ್ಪಿಸಲಾಗಿದೆ. ಪೋಷಣ ಟ್ರ್ಯಾಕರ್ ಮೂಲಕ, ಗಮನ ವಹಿಸಲಾಗುತ್ತಿದೆ, ಎಂದರು.

<><><>

**2047ರ** ‘ವಿಕಸಿತ ಭಾರತ’ದ ಸಂಕಲ್ಪ ಸಾಕಾರಗೊಳ್ಳಲು, ಯುವಜನತೆ ಮಾದಕ ವಸ್ತುಗಳ ವ್ಯಸನದಿಂದ ದೂರವಿರುವುದು ಅನಿವಾರ್ಯ ಎಂದು, ರಾಯಚೂರು ತಾಲೂಕಾ ಆರೋಗ್ಯಾಧಿಕಾರಿ, ಡಾಕ್ಟರ್ ಸತೀಶ, ಹೇಳಿದ್ದಾರೆ. ಮಾಯ್ ಭಾರತ್– ರಾಷ್ಟ್ರೀಯ ಸೇವಾ ಯೋಜನೆ ನಿರ್ದೇಶನಾಲಯದ ವತಿಯಿಂದ, ರಾಯಚೂರಿನ ಸರ್ಕಾರಿ, ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದಲ್ಲಿ, ವಿಕಸಿತ ಭಾರತಕ್ಕಾಗಿ, ನಶೆ ಮುಕ್ತ ಯುವ ಜನತೆ, ಅಭಿಯಾನಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

<><><>

**ಇಂದು ಬಳ್ಳಾರಿ ಜಿಲ್ಲೆಯ** ಎಲ್ಲ ನ್ಯಾಯಾಲಯಗಳಲ್ಲಿ. ‘ರಾಷ್ಟ್ರೀಯ ಜನತಾ ನ್ಯಾಯಾಲಯ’ ಆಯೋಜಿತವಾಗಿದೆ. ಕಕ್ಷಿದಾರರು, ಪರಸ್ಪರ ರಾಜೀ ಸಂಧಾನದ ಮೂಲಕ, ಉಚಿತವಾಗಿ ಇತ್ಯರ್ಥಪಡಿಸಿಕೊಳ್ಳಲು, ಅವಕಾಶ ಕಲ್ಪಿಸಲಾಗಿದೆ. ಚಿತ್ರದುರ್ಗ ಜಿಲ್ಲೆಯ ಎಲ್ಲ ನ್ಯಾಯಾಲಯಗಳಲ್ಲಿ, ಇಂದು 3ನೇ ರಾಷ್ಟ್ರೀಯ ಲೋಕ್ ಅದಾಲತ್ ನಡೆಯಲಿದೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಧ್ಯಾಹ್ನ 2 ರಿಂದ ಸಂಜೆ 5 ಗಂಟೆ 30 ನಿಮಷದ ವರೆಗೆ ಪ್ರಕರಣಗಳ ವಿಚಾರಣೆ ನಡೆಸಲಿದೆ.

<><><>

**ಎಲ್ಲ ವಿಧಾನಸಭಾ ಕ್ಷೇತ್ರಗಳ,** ಕರಡು ಮತದಾರರ ಪಟ್ಟಿ ಆಧರಿಸಿ, ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು 23ನೇ ತಾರೀಖಿನ ವರೆಗೆ, ಚುನಾವಣಾ ಆಯೋಗ ಅವಕಾಶ ಕಲ್ಪಿಸಿದೆ. ತನ್ನಿಮಿತ್ತ ಇಂದು ಮತ್ತು ನಾಳೆ, ರಾಜ್ಯದ ಎಲ್ಲ ಜಿಲ್ಲೆಗಳ ಮತಗಟ್ಟೆಗಳಲ್ಲಿ, ಮತದಾರರ ವಿಶೇಷ ನೋಂದಣಿ ಅಭಿಯಾನ ನಡೆಯಲಿದೆ. ಬಳ್ಳಾರಿ ಜಿಲ್ಲೆಯ ಎಲ್ಲ ಮತಗಟ್ಟೆ ಕೇಂದ್ರಗಳಲ್ಲಿ, ಇಂದು ಹಾಗೂ ನಾಳೆ 18 ವರ್ಷ ಪೂರ್ಣಗೊಳಿಸಿದ, ಯುವಜನರು ಹಾಗೂ ಇದು ವರೆಗೆ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸದ ನಾಗರಿಕರು, ಅರ್ಜಿ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಕೆ. ನಾಗೇಂದ್ರ ಪ್ರಸಾದ ತಿಳಿಸಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ,** ಇಂದು 20ನೇ ರೋಜಗಾರ ಮೇಳಾದಲ್ಲಿ, ಒಟ್ಟು 51 ಸಾವಿರ ಯುವಜನರಿಗೆ, ನೇಮಕಾತಿ ಪತ್ರಗಳನ್ನು ವಿತರಿಸಲಿದ್ದಾರೆ. ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ, ದೇಶದ 45 ಸ್ಥಳಗಳಲ್ಲಿ, ಏಕಕಾಲದಲ್ಲಿ ಕಾರ್ಯಕ್ರಮ ನಡೆಯಲಿದೆ. ಬಳಿಕ, ಪ್ರಧಾನಮಂತ್ರಿ ಮಾತನಾಡಲಿದ್ದಾರೆ. ಬೆಂಗಳೂರು ಕ್ವೀನ್ಸ್ ರಸ್ತೆಯ, ಕಾವೇರಿ ಸಭಾಂಗಣದಲ್ಲಿ ಆಯೋಜಿತ, ರೋಜಗಾರ ಮೇಳಾದಲ್ಲಿ, ಕೇಂದ್ರದ

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಖಾತೆ, ರಾಜ್ಯ ಖಾತೆ ಸಚಿವರಾದ ಶೋಭಾ ಕರಂದ್ಲಾಜೆ, ಪಾಲ್ಗೊಳ್ಳಲಿದ್ದಾರೆ.

<><><>

**ಹುಬ್ಬಳ್ಳಿ-ಧಾರವಾಡ, ಬೆಂಗಳೂರು ಹಾಗೂ ಮೈಸೂರನ್ನು,** ಇಲೆಕ್ಟ್ರಾನಿಕ್ಸ್ ಉದ್ಯಮದ ವಿಶೇಷ ಕ್ಲಸ್ಟರ್‌ಗಳಾಗಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು, ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ. ಬೆಂಗಳೂರಿನ, ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ, 'ಕರ್ನಾಟಕ ವಿದ್ಯುನ್ಮಾನ ನಾಯಕತ್ವ ಸಮಾವೇಶ'ದಲ್ಲಿ ಅವರು, ಮಾತನಾಡಿದರು. ದೇಶದ ಶೇಕಡ 55 ರಷ್ಟು ಐ.ಒ.ಟಿ ನವೋದ್ಯಮಗಳು, ಕರ್ನಾಟಕದಲ್ಲಿವೆ. ರಾಜ್ಯದಲ್ಲಿ 20 ಸಾವಿರಕ್ಕೂ ಹೆಚ್ಚು ಚಿಪ್ ವಿನ್ಯಾಸಕಾರರು ಹಾಗೂ 10 ಸಾವಿರಕ್ಕೂ ಅಧಿಕ ಎನಲಾಗ್ ಅಭಿಯಂತರರಿದ್ದಾರೆ ಎಂದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

**ಕೆ.ಎಲ್.ಇ. ಸಂಸ್ಥೆ, ಧಾರವಾಡ ಜಿಲ್ಲೆ,** ಹುಬ್ಬಳ್ಳಿ ತಾಲೂಕು, ಗಬ್ಬೂರಿನಲ್ಲಿ ನೂತನವಾಗಿ ನಿರ್ಮಿಸಿದ, ಜಗದ್ಗುರು ಗಂಗಾಧರ ಮಹಾಸ್ವಾಮಿಗಳು, ಮೂರುಸಾವಿರ ಮಠ, ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಾವಿರದ 200 ಹಾಸಿಗೆಗಳ, ಕೆ.ಎಲ್.ಇ. ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರದ ಉದ್ಘಾಟನೆಯನ್ನು, ಇಂದು ಬೆಳಗ್ಗೆ 11 ಗಂಟೆಗೆ, ಕೇಂದ್ರ ಗೃಹ ಖಾತೆ ಸಚಿವ ಅಮಿತ ಶಾ ನೆರವೇರಿಸಲಿದ್ದಾರೆ. ಕೆ.ಎಲ್.ಇ. ಉನ್ನತ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರ – ಕಾಹೇರ್ ಕುಲಾಧಿಪತಿ, ಡಾಕ್ಟರ್ ಪ್ರಭಾಕರ ಕೋರೆ, ಅಧ್ಯಕ್ಷತೆ ವಹಿಸಲಿದ್ದಾರೆ. ಬಳಿಕ ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲೂಕು, ಯಕ್ಸಂಬಾ ಗ್ರಾಮದಲ್ಲಿ, ಬೀರೇಶ್ವರ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿಯ ನೂತನ ಕಟ್ಟಡವನ್ನು ಉದ್ಘಾಟಿಸಲಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು,** ಸಾರ್ವಜನಿಕ ಸೇವೆಯಲ್ಲಿ, 25 ವರ್ಷ ಪೂರ್ಣಗೊಳಿಸಿದ ಹಿನ್ನೆಲೆ, ದೇಶಾದ್ಯಂತ ಸೇವಾ ಸಂಕಲ್ಪ ಅಭಿಯಾನ ಆಯೋಜಿತವಾಗಿದೆ. ಹಲವು ವಲಯಗಳಲ್ಲಿ ಕೈಗೊಂಡ, ಮಹತ್ವದ ಸುಧಾರಣೆಗಳ ಕುರಿತ, ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದು, ಸ್ಟಾರ್ಟ್‌ಅಪ್ ಇಂಡಿಯಾ ಪ್ರಕಲ್ಪದ ಕುರಿತ, ಒಳ ನೋಟ ಇಲ್ಲಿದೆ. ಸ್ಟಾರ್ಟ್‌ಅಪ್ ಇಂಡಿಯಾ, 2016 ರಲ್ಲಿ ಕೇಂದ್ರ ಸರ್ಕಾರ, ಮಹತ್ವಾಕಾಂಕ್ಷೆಯಿಂದ ಆರಂಭಿಸಿತು. ದೇಶಿ ಉದ್ಯಮ ಹಾಗೂ ಸ್ಥಳೀಯ ಔದ್ಯೋಗಿಕ ಸಂಸ್ಕೃತಿಗೆ

ಉತ್ತೇಜನ ನೀಡುವುದು, ಈ ಪ್ರಕಲ್ಪದ ಉದ್ದೇಶ. ಉದ್ಯೋಗಾಕಾಂಕ್ಷಿ ಯುವಜನರ ದೇಶದ ಹಣೆಪಟ್ಟಿ ಕಳಚಿ, ಉದ್ಯೋಗದಾತ ಉದ್ಯಮಿಗಳ ದೇಶ ಎಂಬ, ಗುರಿಸಾಧನೆಗೆ ಈ ಉಪಕ್ರಮ ಪ್ರೋತ್ಸಾಹಿಸುತ್ತಿದೆ. ಪ್ರಸಕ್ತ 2026 ರ ಮಾರ್ಚ್ ವೇಳೆಗೆ, ದೇಶಾದ್ಯಂತ ಕಾರ್ಯನಿರ್ವಹಿಸುತ್ತಿರುವ, ಸ್ಟಾರ್ಟ್‌ಅಪ್‌ಗಳ ಸಂಖ್ಯೆ, 2 ಲಕ್ಷದಷ್ಟಿದೆ. 23 ಲಕ್ಷದಷ್ಟು ನೇರ ಉದ್ಯೋಗ ಸೃಷ್ಟಿಯಾಗಿವೆ. ಶೇಕಡ 50 ರಷ್ಟು ಸ್ಟಾರ್ಟ್‌ಅಪ್‌ಗಳು, ದ್ವಿತೀಯ ಹಾಗೂ ತೃತೀಯ ಹಂತದ ನಗರಗಳಲ್ಲಿ ಕಾರ್ಯಾರಂಭಿಸಿವೆ. ಬೆಂಗಳೂರು ಸೇರಿದಂತೆ, ದೇಶದಲ್ಲಿ, 1 ಲಕ್ಷ ನವೋದ್ಯಮಗಳ ನಿರ್ದೇಶಕರು ಹಾಗೂ ಪಾಲುದಾರರಾಗಿ, ಮಹಿಳೆಯರು ಸಾರಥ್ಯವಹಿಸಿರುವುದು ವಿಶೇಷ.

<><><>

**ಬೆಳಗಾವಿಯ ಕೃಷಿ ಸ್ಟಾರ್ಟ್ ಅಪ್, ಕಿಸಾನ್ ಕನೆಕ್ಟ್ ಎಲ್.ಎಲ್.ಪಿ, ರೋಟೊ ಕಲ್ಟಿವೇಟರ್** ಸೇರಿದಂತೆ, ವಿವಿಧ ಕೃಷಿ ಉಪಕರಣಗಳನ್ನು ಉತ್ಪಾದಿಸುತ್ತಿದೆ. 2021 ರಲ್ಲಿ ಕಾರ್ಯಾರಂಭಿಸಿದ ನವೋದ್ಯಮ ಕಂಪೆನಿ, ಪ್ರಸ್ತುತ ಒಂದು ಕೋಟಿ ರೂಪಾಯಿ ವಾರ್ಷಿಕ ವಹಿವಾಟು ನಡೆಸುತ್ತಿದೆ. ಕಿಸಾನ್ ಕನೆಕ್ಟ್ ಕಾರ್ಯನಿರ್ವಾಹಕ ನಿರ್ದೇಶಕ ಅಭಿಷೇಕ ಬೆಂಬಳಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

**ಅಭಿಷೇಕ ಬೆಂಬಳಗಿ ಧ್ವನಿ– 48 ಸೆಕೆಂದುಗಳು**

<><><>

**ಬಳ್ಳಾರಿ ನಗರದ, ಕೃಷಿ ಉತ್ಪನ್ನಗಳ ಮಾರುಕಟ್ಟೆ** – ಎ.ಪಿ.ಎಂ.ಸಿ. ಆವರಣದಲ್ಲಿ, ಸಂಬಂಧಿತ ಇಲಾಖೆಗಳ ಅಧಿಕಾರಿಗಳು, ಕಾರ್ಯಾಚರಣೆ ನಡೆಸಿ, ಮೂವರು ಬಾಲ ಹಾಗೂ ಕಿಶೋರ ಕಾರ್ಮಿಕ ಮಕ್ಕಳನ್ನು, ರಕ್ಷಿಸಿದ್ದಾರೆ. ಬಳ್ಳಾರಿ ಜಿಲ್ಲಾಧಿಕಾರಿ ನಿರ್ದೇಶನದಂತೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಪೊಲೀಸ್ ಇಲಾಖೆಯ ಸಹಯೋಗದಲ್ಲಿ, ಕಾರ್ಯಾಚರಣೆ ವೇಳೆ ಪತ್ತೆಯಾದ ಬಾಲ ಕಾರ್ಮಿಕರನ್ನು ಪೋಷಕರ ಸುಪರ್ದಿಗೆ ನೀಡಲಾಗಿದೆ. ಅಂಗಡಿ ಮಾಲಿಕರ ವಿರುದ್ಧ, ಪ್ರಕರಣಗಳು ದಾಖಲಾಗಿವೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿಯವರ,** 25 ವರ್ಷಗಳ ಸಾರ್ವಜನಿಕ ಸೇವೆಯ ಗೌರವಾರ್ಥ, ಈ ತಿಂಗಳ 17ನೇ ತಾರೀಖಿನಿಂದ, ಅಕ್ಟೋಬರ್ 17ರ ವರೆಗೆ, ವಿಶೇಷ 'ಸೇವಾ ಕಾರ್ಯ' ಅಭಿಯಾನ ಆಯೋಜಿಸಲಾಗಿದೆ ಎಂದು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸಂಸದ, ಗೋವಿಂದ ಕಾರಜೋಳ, ತಿಳಿಸಿದ್ದಾರೆ. ಚಿತ್ರದುರ್ಗದಲ್ಲಿ, ಅವರು ಸುದ್ದಿಗಾರರೊಂದಿಗೆ ಮಾತನಾಡಿದರು, ಗರೀಬ ಕಲ್ಯಾಣ, ಪಿ.ಎಂ. ಸ್ವನಿಧಿ, ಉಜ್ವಲಾ ಹಾಗೂ ವಿಶ್ವಕರ್ಮ ಯೋಜನೆಗಳಂತಹ ಜನಪರ ಯೋಜನೆಗಳು, ಸ್ವಚ್ಛ ಭಾರತ ಅಭಿಯಾನದಡಿ, 14 ಕೋಟಿ ಶೌಚಾಲಯಗಳ ನಿರ್ಮಾಣ, ಜನೌಷಧಿ ಕೇಂದ್ರಗಳ ಮೂಲಕ, ಶೇಕಡ 90 ರಷ್ಟು ಕಡಿಮೆ ದರದಲ್ಲಿ, ಔಷಧಿಗಳು, ಶ್ರೀಸಾಮಾನ್ಯರ ಯೋಗಕ್ಷೇಮ ಕಾಪಾಡುತ್ತಿವೆ, ಎಂದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಡಾಕ್ಟರ್ ಕೆ. ಕಸ್ತೂರಿರಂಗನ್ ವರದಿ ಅನುಷ್ಠಾನ;** ರಾಜ್ಯದ ನಿಲುವು, 27ನೇ ತಾರೀಖಿನ ಒಳಗೆ, ಕೇಂದ್ರಕ್ಕೆ ಸ್ಪಷ್ಟನೆ – ಮುಖ್ಯಮಂತ್ರಿ.

**ಬಾಗಲಕೋಟೆ ಜಿಲ್ಲೆಯಲ್ಲಿ,** ಪೋಷಣ ಮಾಸಾಚರಣೆಗೆ, ಜಿಲ್ಲಾಧಿಕಾರಿ ಸಂಗಪ್ಪ ಚಾಲನೆ.

**ಹುಬ್ಬಳ್ಳಿಯ, ಕೆ.ಎಲ್.ಇ. ಜಗದ್ಗುರು ಗಂಗಾಧರ ಮಹಾಸ್ವಾಮಿಗಳು,** ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆ; ಕೇಂದ್ರ ಸಚಿವ ಅಮಿತ ಶಾ, ಇಂದು ಲೋಕಾರ್ಪಣೆ.

**ಸ್ಟಾರ್ಟ್‌ಅಪ್ ಇಂಡಿಯಾ ಪ್ರಕಲ್ಪ;** ದೇಶದ 1 ಲಕ್ಷ ನವೋದ್ಯಮಗಳ ಪಾಲುದಾರರಾಗಿ, ಮಹಿಳೆಯರ ಸಾರಥ್ಯ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>